ದಿನಾಂಕಃ 14-10-2022 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್ ಟಿ ಎಸ್ ಕೆ ವಕೀಲರಿಂದಃ ಆರೋಪಿ ಪರವಾಗಿಃ

35. ಜೈಲಿನಿಂದ ನನಗೆ ಯಾರು ಕರೆ ಮಾಡಿಲ್ಲ ಮತ್ತು ಅವರು ನನಗೆ ಏನನ್ನೂ ಕೇಳಿಲ್ಲ. ನನ್ನ ತಂದೆ 2010 ನೇ ಇಸವಿಯಲ್ಲಿ ಮೃತಪಟ್ಟಿದ್ದಾರೆ. ದಿನಾಂಕ 13.05.2015 ನೇ ತಾರೀಖಿನಿಂದ ನಿಮ್ಮ ತಾಯಿ ಆರೋಪಿಗೆ ಚಿಕ್ಕಮಗಳೂರಿನ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಯಲ್ಲಿ ಮಾನಸಿಕ ರೋಗಿ ಎಂಬ ಕಾರಣಕ್ಕೆ ಮನೋ ವೈದ್ಯರ ಬಳಿ ಚಿಕಿತ್ಸೆ ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆತ ಮಾನಸಿಕ ರೋಗಿ ಎಂದು ಚಿಕಿತ್ಸೆ ಕೊಡಿಸಿಲ್ಲ ಆದರೆ ಆತನಿಗೆ ಇದ್ದ ಕುಡಿಯುವ ಮತ್ತು ಸಿಗರೇಟ್ ಸೇದುವ ಚಟವನ್ನು ಬಿಡಿಸಲು ಚಿಕಿತ್ಸೆ ಕೊಡಿಸಿದ್ದಾರೆ ಎನ್ನುತ್ತಾರೆ. ನನ್ನ ತಾಯಿ ಆರೋಪಿಯನ್ನು ತಿಂಗಳಿಗೆ ಎಷ್ಟು ಬಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಿಮ್ಮ ತಾಯಿ ಪ್ರತೀ ತಿಂಗಳು ಆರೋಪಿಯನ್ನು ಮನೋ ವೈದ್ಯರ ಬಳಿ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸುತ್ತಿದ್ದರು ಎಂದರೆ ಸರಿಯಲ್ಲ. ನಿಮ್ಮ ಅಣ್ಣನಾದ ಆರೋಪಿಗೆ Schizo obsessive disorder ಮಾನಸಿಕ ರೋಗವಿದೆ ಎಂದರೆ ಸರಿಯಲ್ಲ.

36. ಆರೋಪಿ ಜೈಲಿಗೆ ಹೋದ ನಂತರ ಮನೋ ವೈದ್ಯರು ಆರೋಪಿಯ ಹಿಂದಿನ ಮೆಡಿಕಲ್ ರೆಕಾರ್ಡ್ಸ್‌ಗನ್ನು ತಂದು ಕೊಡುವಂತೆ ನಿಮಗೆ ತಿಳಿಸಿದ್ದರೂ ಸಹ ಆ ಬಗ್ಗೆ ನೀವು ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಯಾರು ಯಾವುದೇ ದಾಖಲೆಗಳನ್ನು ಕೇಳಿಲ್ಲ, ಘಟನೆಯ ಬಳಿಕ ಪೊಲೀಸರು ನಮ್ಮ ಮನೆಯಲ್ಲಿ ಸಿಕ್ಕ ದಾಖಲೆಗಳನ್ನು ತೆಗೆದುಕೊಂಡಿದ್ದಾರೆ ಅದನ್ನು ಹೊರತುಪಡಿಸಿ ನನಗೆ ಏನು ಗೊತ್ತಿಲ್ಲ ಎನ್ನುತ್ತಾರೆ. ಆರೋಪಿಯ ಬಳಿ ಇದ್ದ 2015 ರಿಂದ 2017 ನೇ ಇಸವಿಯವರೆಗಿನ ದಾಖಲೆಗಳನ್ನು ಹೊರತುಪಡಿಸಿ ನಂತರದ ದಾಖಲೆಗಳನ್ನು ನೀವು ನಾಶಪಡಿಸಿದ್ದೀರಿ ಎಂದರೆ ಸರಿಯಲ್ಲ. ನೀವು ನಿಮ್ಮ ತಾಯಿಯ ಬಳಿ ಹಣವನ್ನು ಕೊಡುವಂತೆ ಪೀಡಿಸಿ ಗಲಾಟೆ ಮಾಡುತ್ತಿದ್ದಾಗ ಆರೋಪಿ ಬಿಡಿಸಲು ಬಂದಾಗ ನೀವು ಆತನ ಮೇಲೆಯೂ ಸಹ ಹಲ್ಲೆ ಮಾಡುತ್ತಿದ್ದಿರಿ ಎಂದರೆ ಸರಿಯಲ್ಲ. ಆರೋಪಿಯ ಮಾನಸಿಕ ಸ್ಥಿತಿ ಸರಿ ಇಲ್ಲದ ಕಾರಣ ನಿಮಗೆ ಆತನ ಮೇಲೆ ಸಿಟ್ಟು ಇತ್ತು ಎಂದರೆ ಸಾಕ್ಷಿ ಆತನ ಮಾನಸಿಕ ಸ್ಥಿತಿ ಸರಿ ಇತ್ತು ಮತ್ತು ನನಗೆ ಆತನ ಮೇಲೆ ಯಾವುದೇ ಸಿಟ್ಟು ಇರಲಿಲ್ಲ ಎನ್ನುತ್ತಾರೆ.

37. ಹಿಂದಿನ ಮುದ್ದತಿನಂದು ನಿಮ್ಮ ಪಾಟೀ ಸವಾಲು ನಡೆದ ಬಳಿಕ ನೀವು ನಿಮ್ಮ ಊರಿನ ವಕೀಲರನ್ನು ಸಂಪರ್ಕಿಸಿ ಈ ಪ್ರಕರಣದಲ್ಲಿ ನನ್ನನ್ನು ಅಪರಾಧಿಯನ್ನಾಗಿ ಮಾಡಬಹುದು ಬೇಲನ್ನು ಕೊಡಿಸಿ ಎಂದು ಕೇಳಿಕೊಂಡಿದ್ದೀರಿ ಎಂದರೆ

ಸರಿಯಲ್ಲ. ನಿಮಾನ್ಸ್ ನಿಂದ ವೈದ್ಯರು ನಿಮಗೆ ಕರೆ ಮಾಡಿದ ಬಳಿಕ ನೀವು ಅವರನ್ನು ಸಂಪರ್ಕಿಸಿ ಅವರಿಗೆ ದಾಖಲೆಗಳನ್ನು ನೀಡಲು ಪ್ರಯತ್ನಿಸಿಲ್ಲ ಎಂದರೆ ಸಾಕ್ಷಿ ಸದರಿ ವೈದ್ಯರು ವಿಚಾರಿಸಿದಾಗ ನನಗೆ ತಿಳಿದ ವಿಚಾರಗಳನ್ನು ತಿಳಿಸಿದ್ದೇನೆ, ಆದರೆ ನನ್ನ ಕೆಲಸದ ಕಾರಣ ಅವರನ್ನು ಸಂಪರ್ಕಿಸಲು ಆಗಿಲ್ಲ ಎನ್ನುತ್ತಾರೆ. ನೀವು ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದೀರಿ ಮತ್ತು ಸದರಿ ವೈದ್ಯರಿಂದ ಕರೆ ಬಂದಾಗಲೂ ಸಹ ನೀವು ಬೆಂಗಳೂರಿನಲ್ಲಿಯೇ ಇದ್ದಿರಿ ಎಂದರೆ ಸರಿ. ನನ್ನ ಬಳಿ ಕಾರು ಇಲ್ಲ, ಆದರೆ ಪಲ್ಸರ್ 220 ಬೈಕು ಇದೆ.

38. ನಿಮಗೆ ನಿಮ್ಮ ತಂದೆಯ ಅಪಘಾತದಿಂದ ಬಂದ ಹಣ ಮತ್ತು ನಿಮ್ಮ ಆಸ್ತಿಯಿಂದ ಬರುವ ಹಣದಲ್ಲಿ Luxury ಜೀವನವನ್ನು ಜೀವಿಸುವ ಆಸೆ ಇದೆ ಎಂದರೆ ಸರಿಯಲ್ಲ. ನಿಮ್ಮ ಬಾಲ್ಯದಿಂದಲೂ ಸಹ ನೀವು ನಿಮ್ಮ ಅಣ್ಣನನ್ನು ದ್ವೇಷಿಸುತ್ತಿದ್ದಿರಿ ಎಂದರೆ ಸರಿಯಲ್ಲ. ನಿಮ್ಮ ತಾಯಿ ಆರೋಪಿ ಮಾನಸಿಕವಾಗಿ weak ಆಗಿದ್ದಾನೆ ಆತನನ್ನು ಚೆನ್ನಾಗಿ ನೋಡಿಕೋ ಎಂದು ಹೇಳುತ್ತಿದ್ದರೂ ಸಹ ನೀವು ನಿಮ್ಮ ತಾಯಿ ಮತ್ತು ಆರೋಪಿಯೊಂದಿಗೆ ಜಗಳ ಮಾಡುತ್ತಿದ್ದಿರಿ ಎಂದರೆ ಸರಿಯಲ್ಲ. ನಿಮ್ಮ ತಾಯಿಯನ್ನು ನೀವೆ ಕೊಲೆ ಮಾಡಿ, ನಿಮ್ಮ ಆಸ್ತಿ ಎಲ್ಲಾ ನಿಮಗೆ ಸಿಗಬೇಕೆಂದು ಮಾನಸಿಕ ಅಸ್ವಸ್ಥನಾದ ನಿಮ್ಮ ಅಣ್ಣ ನಿಮ್ಮ ತಾಯಿಯನ್ನು ಕೊಲೆ ಮಾಡಿರುವುದಾಗಿ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಆರೋಪಿ ಎಂದಿಗೂ ಮನೆಯಿಂದ ಹೊರಗಡೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯುವ ಸಲುವಾಗಿ ಆರೋಪಿಯ ವಿರುದ್ಧ ಸುಳ್ಳು ದೂರನ್ನು ಕೊಟ್ಟಿದ್ದೇನೆ ಮತ್ತು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ